Mr. SPEAKER.—He went there as Chief Minister. That question was answered.

ಶ್ರೀ ಮುಲ್ಕ ಗೋವಿಂದರೆಡ್ಡಿ.—ತಮ್ಮ ಜೊತೆಯಲ್ಲಿ ಬಂದಿದ್ದ ಪರಿವಾರದ ಖರ್ಚು ಸಹ ಈ ಮೊಬಲಗಿನಲ್ಲಿ ಸೇರಿದೆಯೇ ?

Sri K. HANUMANTHAIYA.—No.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಾದರೆ ಮೊಬ್ಬರದು ಮಾತ್ರವೇ ಅಥವಾ ನಿಮ್ಮ ಪರ್ಸನಲ್ ಅಸಿಸ್ಟೆಂಟರು, ಪರ್ಸನಲ್ ಸೆಕ್ರೆಟರಿ ಅವರದೂ ಸೇರಿದೆಯೇ ?

Sri K. HANUMANTHAIYA.—Of course, the personal establishment came and they drew their T.A. and D.A. according to rules.

Sri MULKA GOVINDA REDDY.—Did the members of the Legislature who accompanied the Chief Minister, draw any allowance ?

Sri K. HANUMANTHAIYA.—They did not draw anything.

Sri MULKA GOVINDA REDDY.—So they spent their own money and came there ?

Sri K. HANUMANTHAIYA.—Yes.

Amenities provided to members of Depressed Classes in Periyapatna and Hunsur Taluks.

Q.—165. Sri S. M. MARIAPPA (Periyapatna).—

Will the Government be pleased to state :—

(*a*) the number of families of Depressed Class people living in Periyapatna and Hunsur Taluks;

(*b*) the amenities that have been provided by them, *viz.*, grant of lands, supplying building materials, building grants, loans, etc. (information may kindly be given in tabular form since 1948 up-to-date) ?

A.—Sri K. HANUMANTHAIYA (Chief Minister).—

		Families.
(*a*)	Periyapatna	.. 2,028
	Hunsur	.. 1,752
	Total	.. 3,780

(*b*) Land grants — in acres.

	1948-49		1949-50		1950-51		1951-52		1952-53	
	A.	G.	A.	G.	A.	G.	A.	G.	A.	G.
Periyapatna	30	0	70	27	12	0	256	29	43	0
Hunsur ..	63	0	442	19	226	21	52	17	80	0
Total ..	93	0	513	6	238	21	279	6	123	0

Supply of building materials and building grants.

	1948-49	1949-50	1950-51	1951-52	1952-53
	Rs.	Rs.	Rs.	Rs.	Rs.
Periyapatna	9,000	5,000	5,000	10,945	8,300
Hunsur ..	16,500	12,500	19,500	21,000	12,800
Total ..	25,500	17,500	24,500	31,945	21,100

Loans.

	1948-49	1949-50	1950-51	1951-52	1952-53
	Rs.	Rs.	Rs.	Rs.	Rs.
Periyapatna	..	..	Nil	..	..
Hunsur ..	325	..	..	..	300
Total ..	325	..	..	..	300

ಶ್ರೀ ಎಸ್. ಎಂ. ಮರಿಯಪ್ಪ.—1952-53ನೆಯ ಸಾಲಿನಲ್ಲಿ 43 ಎಕರೆಗಳನ್ನು ಮಾತ್ರ ಕೊಟ್ಟಿದೆಯೆಂದು ಹೇಳಿದೆ. ಆ ತಾಲ್ಲೂಕಿನಿಂದ ಈ ಬಗ್ಗೆ ದರಖಾಸ್ತು, ಅರ್ಜಿಗಳು ಎಷ್ಟು ಬಂದಿಕ್ಕೆಬುದನ್ನು ಹೇಳುತ್ತೀರಾ?

Sri K. HANUMANTHAIYA.—I have no information here. I can furnish it if he wants.

ಶ್ರೀ ಎಸ್. ಎಂ. ಮರಿಯಪ್ಪ.—ಈ ತಾಲ್ಲೂಕಿನಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ನಿಮ್ಮ ತರಗತಿಯವರಿಗೆ ಸರಿಯಾಗಿ ಜಮೀನು ದೊರಕುತ್ತಿಲ್ಲವೆಂಬುದು ಗೊತ್ತಿದೆಯೇ?

Sri K. HANUMANTHAIYA.—That is an observation which according to rules I cannot answer.

ಶ್ರೀ ಎಸ್. ಎಂ. ಮರಿಯಪ್ಪ.—1952-53ನೆಯ ಸಾಲಿಗೆ ಮನೆಕಟ್ಟುವುದಕ್ಕೆ 8,300 ರೂಪಾಯಿಗಳನ್ನು ಮಾತ್ರ ಖರ್ಚುಮಾಡಿರುವುದಾಗಿ ಕೊಟ್ಟಿದೆ. ಆ ಸಾಲಿನ ಬಜೆಟ್ಟಿನಲ್ಲಿ ಸ್ಯಾಂಕ್ಷನ್ ಆಗಿದ್ದ ಪೂರ್ಣ ಮೊಬಲಗೆಷ್ಟು?

Sri K. HANUMANTHAIYA.—Every information is given here.

ಶ್ರೀ ಎಸ್. ಎಂ. ಮರಿಯಪ್ಪ.—ಉತ್ತರದಲ್ಲಿ ಕೊಟ್ಟಿಲ್ಲ! ಆ ವರ್ಷ ಸ್ಯಾಂಕ್ಷನ್ ಮಾಡಿದ್ದ ಹಣವೆಷ್ಟು?

ಅಧ್ಯಕ್ಷರು.—1952-53 ಕ್ಕೆ ಮನೆ ಕಟ್ಟುವ ಸಾಮಾನುಗಳನ್ನೆಷ್ಟು ಕೊಟ್ಟಿದೆ, ಎಷ್ಟು ಗ್ರಾಂಟು ಕೊಟ್ಟಿದೆಯೆಂದು ಅಲ್ಲೇ ಕೊಟ್ಟಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಖರ್ಚು ಮಾಡಿದ ಮೊಬಲಗು ಮಾತ್ರ ಹೇಳಿದ್ದೀರಿ. ಸ್ಯಾಂಕ್ಷನ್ ಮಾಡಿದ ಮೊಬಲಗೆಷ್ಟು?

Sri K. HANUMANTHAIYA.—Notice.

ಶ್ರೀ ಎಸ್. ಎಂ. ಮರಿಯಪ್ಪ.—ಅನೇಕ ಮನೆಗಳ ವಿಷಯದಲ್ಲಿ ಅರ್ಧ ಭಾಗ ಮಾತ್ರ ದುಡ್ಡು ಕೊಟ್ಟುದರಿಂದ ಮನೆಗಳನ್ನು ಪೂರ್ತಿಕಟ್ಟುವುದಕ್ಕಾಗದೆ ಹಾಗೆಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri K. HANUMANTHAIYA.—Notice.

ಶ್ರೀ ಎಸ್. ಎಂ. ಮರಿಯಪ್ಪ.—ಈಗಲಾದರೂ ಆ ಮನೆಗಳಿಗೆ ಸಾಕಾದಷ್ಟು ಮೊಬಲಗುಗಳನ್ನು ಒದಗಿಸಿ ಅವುಗಳನ್ನು ಪೂರ್ತಿಮಾಡುವುದಕ್ಕೆ ಅವಕಾಶಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಅರ್ಧ ಆಗಿರುವ ಮನೆಗಳನ್ನು ಪೂರ್ತಿಯಾಗುವಂತೆ ಮಾಡಬೇಕೆಂಬುದೇ ಸರ್ಕಾರದವರ ನೀತಿ.

ಶ್ರೀ ಎಸ್. ಎಂ. ಮರಿಯಪ್ಪ.—ಆ ಮನೆಗಳಿಗೆ ಕಾನೂನು ಪ್ರಕಾರ ಒಂದೊಂದಕ್ಕೂ ಎಷ್ಟು ಹಣಕೊಡಬೇಕೆಂದಿದೆ.

ಶ್ರೀ ಕೆ. ಹನುಮಂತಯ್ಯ.—300 ರೂಪಾಯಿಗಳು.

ಶ್ರೀ ಎಸ್. ಎಂ. ಮರಿಯಪ್ಪ.—ಆಮೇಲೆ, ಸಾಲ ಕೊಡುವ ವಿಷಯದಲ್ಲಿಯೂ ಕೂಡ ಈ ತಾಲ್ಲೂಕಿನಲ್ಲಿ ಯಾರಿಗೂ ಕೂಡ ಸ್ಯಾಂಕ್ಷನ್ ಮಾಡಿಲ್ಲವಲ್ಲ; ಕಾರಣವೇನು?

Sri K. HANUMANTHAIYA.—The people may be well off.

ಶ್ರೀ ಎಸ್. ಎಂ. ಮರಿಯಪ್ಪ.—ಅಂದರೆ, ಸಾಲಕ್ಕಾಗಿ ಸರ್ಕಾರಕ್ಕೆ ಅರ್ಜಿಗಳೇ ಬಂದಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ನೋಟಿಸ್.

ಶ್ರೀ ಎಸ್. ಎಂ. ಮರಿಯಪ್ಪ.—ತಾವು ನಿಮ್ಮ ತರಗತಿಯವರೆಗೆ ಹಣ ಸಾಲಕೊಡಬೇಕಾದರೆ ಅವರಲ್ಲಿ ಕೆಲವು ಅರ್ಹತೆಗಳಿರಬೇಕೆಂದು ಗೊತ್ತುಮಾಡಿಕೊಂಡಿದ್ದೀರಿ. ಇದರಿಂದಾಗಿ ಅವರಿಗೆ ಸಾಲ ದೊರೆಯುತ್ತಿಲ್ಲ. ಇನ್ನು ಮೇಲಾದರೂ ಅವನ್ನು ತೆಗೆದು ಸಾಲದಮೊಬಲಗನ್ನು ಸಲೀಸಾಗಿ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ?

Sri K. HANUMANTHAIYA.—The suggestion will be taken note of.

ಶ್ರೀ ಜಿ. ದುಗ್ಗಪ್ಪ.—ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ, 1948-49, 49-50, 50-51, 51-52 ಸಾಲಿಗಿಂತ 1952-53ನೆಯ ಸಾಲಿನಲ್ಲಿ ಬಹಳ ಕಡಮೆ ಹಣಖರ್ಚಾಗಿದೆಯೆಂದು ಗೊತ್ತಾಗುತ್ತದೆ. ಇದರಿಂದ, ತಾವು ಕೊಟ್ಟಿರುವ ಹಣವನ್ನು ಖರ್ಚುಮಾಡಕೂಡದೆಂದು ಅಧಿಕಾರಿಗಳಿಗೇನಾದರೂ ಸೂಚನೆಕೊಟ್ಟಿದ್ದೀರಿ ಎಂದು ಭಾವಿಸಬಹುದೇ?

Sri K. HANUMANTHAIYA.—Such instructions have not been given.

ಶ್ರೀ ಜಿ. ದುಗ್ಗಪ್ಪ.—ಹಾಗಾದರೆ ಖರ್ಚಾಗದಿರುವುದಕ್ಕೆ ಕಾರಣವೇನು?

Sri K. HANUMANTHAIYA.—A separate question may be asked and I will let him know the reason.

ಶ್ರೀ ಜಿ. ದುಗ್ಗಪ್ಪ.—ಇಲ್ಲಿ 115ನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ, 1952-53ನೆಯ ಸಾಲಿಗೆ ಒದಗಿಸಿದ್ದ 19 ಲಕ್ಷ ರೂಪಾಯಿಗಳ ಗ್ರಾಂಟಿನಲ್ಲಿ 9,80,687 ರೂಪಾಯಿಗಳು ಮಾತ್ರ ಖರ್ಚಾಗಿದೆಯೆಂದು ಹೇಳಿದ್ದೀರಿ. ಇದರ ಅರ್ಥವೇನು?

ಅಧ್ಯಕ್ಷರು.—ಖರ್ಚಾಗಿದ್ದನ್ನು ತೋರಿಸಿದ್ದಾರೆ; ಅಷ್ಟೆ.

ಶ್ರೀ ಜಿ. ದುಗ್ಗಪ್ಪ.—ಅಧಿಕಾರಿಗಳಿಗೇನಾದರೂ ಖರ್ಚುಮಾಡಬೇಡಿ ಎಂದು ಹೇಳಿದ್ದೀರಾ?

Sri K. HANUMANTHAIYA.—I strongly object to the insinuation the Hon'ble Member is making.

12-30 P.M.

ಶ್ರೀ ಟಿ. ಹನುಮಯ್ಯ.—1952-53ನೆಯ ಸಾಲಿನಲ್ಲಿ 19 ಲಕ್ಷದಲ್ಲಿ 9 ಲಕ್ಷ ರೂಪಾಯಿ ಮಾತ್ರ ಖರ್ಚುಮಾಡಿದೆ. ಉಳಿದುದನ್ನೇಕೆ ಖರ್ಚುಮಾಡಲಿಲ್ಲ? ಅವರು ಹಣ ಕೇಳಲಿಲ್ಲವೋ ಅಥವಾ ಸರ್ಕಾರದವರು ಕೊಡಲಿಲ್ಲವೋ?

Sri K. HANUMANTHAIYA.—As I said, Sir, the expenditure for 1952-53 may not really show the full expenditure incurred; I promise to let the House know the reasons for not spending the full amount.

ಶ್ರೀ ಟಿ. ಹನುಮಯ್ಯ.—ಖರ್ಚಾಗದಿರುವುದಕ್ಕೆ ಏನು ಕಾರಣವೆಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಅಧ್ಯಕ್ಷರು.—ವಿಚಾರಮಾಡಿ ತಿಳಿಸುತ್ತೇವೆಂದು ಹೇಳಿದ್ದಾರೆ. ಬೇರೆ ಪ್ರಶ್ನೆ ಇದ್ದರೆ ಕೇಳಿ. This was a question which was sent before 15-2-1953.

ಶ್ರೀ ಹೆಚ್. ಕೆ. ಸಿದ್ದಯ್ಯ.—ಡಿಪ್ರೆಸ್ಡ್‌ಕ್ಲಾಸ್ ಜನರಿಗೆ ಹೆಂಚುಗಳನ್ನು ಕೊಡುವುದಕ್ಕೆ ರೆವೆನ್ಯೂ ಇನ್‌ಸ್ಪೆಕ್ಟರನ್ನು ಕೇಳಬೇಕೆಂದು ಅಪ್ಪಣೆಮಾಡಿದ್ದಾರೆ, ಕಾರಣವೇನು?

ಶ್ರೀ ಕೆ. ಹನುಮಂತಯ್ಯ.—ಆ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

Licences to run petrol bunks in the State.

Q.—97. Sri B. RACHIAH (Yelandur—Scheduled Castes).—

Will the Government be pleased to state:—

(*a*) the names of persons who have been granted licences to run petrol bunk in the State from 1948 up-to-date (talukwar and communitywar information may kindly be given);

(*b*) the total number of applications received from 1948 (yearwar information may kindly be given);

(*c*) the licensing authority and the conditions under which the licences were issued;

(*d*) the names of persons whose licences have been withdrawn from 1948?

A.—Sri A. G. RAMACHANDRA RAO (Minister for Law and Education).—

(*a*) to (*d*) This is a Central subject dealt with by the Department of Mines and Explosives under the Central Government. Information is, therefore, not available.

ಶ್ರೀ ಬಿ. ರಾಚಯ್ಯ.—ಲೈಸೆನ್ಸ್ ಕೊಡುವಾಗ ಸಂಸ್ಥಾನದ ಸರ್ಕಾರದ ಅಭಿಪ್ರಾಯವನ್ನು ಕೇಳುತ್ತಾರೆಯೆ?

Sri A. G. RAMACHANDRA RAO.—It is left to them.

ಶ್ರೀ ಬಿ. ರಾಚಯ್ಯ.—ಇದುವರೆಗೆ ಕೇಳಿಲ್ಲವೆ?

Sri A. G. RAMACHANDRA RAO.—I want notice.

ಶ್ರೀ ಬಿ. ರಾಚಯ್ಯ.—ಹಾಗಾದರೆ ಮಹಜರು ಕ್ರಮ ನಡೆಸುವವರಾರು?

Sri A. G. RAMACHANDRA RAO.—The question is vague—whether it was done, etc.

ಶ್ರೀ ಮುಸ್ಕ ಗೋವಿಂದರೆಡ್ಡಿ.—ಪೆಟ್ರೋಲ್ ಬಂಕುಗಳಿಂದ ಒಳ್ಳೆಯ ಆದಾಯ ಬರುತ್ತದಲ್ಲವೆ?

Sri A. G. RAMACHANDRA RAO.—I have no idea.

ಶ್ರೀ ಮುಲ. ಗೋವಿಂದರೆಡ್ಡಿ.—ಇವುಗಳನ್ನು ಮುನಿಸಿಪಾಲಿಟಿಗಳೂ ಕಾರ್ಪೊರೇಷನ್‌ಗಳೂ ನಡೆಸುವುದು ಸೂಕ್ತವಲ್ಲವೆ?

Sri A. G. RAMACHANDRA RAO.—I have no opinion at present.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ರೀತಿ ಮಾಡುವುದರಿಂದ ಮುನಿಸಿಪಾಲಿಟಿಗಳಿಗೂ ಕಾರ್ಪೊರೇಷನ್‌ಗಳಿಗೂ ಇರುವ ಹಣದ ಅಭಾವನೀಗಲು ಅನುಕೂಲವಾಗುವುದರಿಂದ, ಹೀಗೆ ಸೂಚನೆಮಾಡುವುದು ಒಳ್ಳೆಯದಲ್ಲವೇ?

Sri A. G. RAMACHANDRA RAO.—It will be considered.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪೆಟ್ರೋಲ್ ಬಂಕುಗಳಿಗೆ ಲೈಸೆನ್ಸ್ ಕೊಡುವುದು ಕೇಂದ್ರ ಸರ್ಕಾರವೆಂದು ಹೇಳಿದ್ದೀರಿ. ಅವುಗಳನ್ನಿಡುವ ಸ್ಥಳಗಳು ಮೈನೂರು ಸರ್ಕಾರಕ್ಕೊಳಪಟ್ಟಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸ್ಥಳಗಳಿಗೆ ಗ್ರೌಂಡ್‌ರೆಂಟ್ ಹಾಕಿದ್ದೀರಾ?

Sri A. G. RAMACHANDRA RAO.—I want notice.

ಶ್ರೀ ಎಂ. ಚಿಕ್ಕಲಿಂಗಯ್ಯ.—ಗ್ರೌಂಡ್‌ರೆಂಟ್ ಮತ್ತು ಸೇಲ್ಸ್ ಟ್ಯಾಕ್ಸ್ ಕೊಡಬೇಕಾಗುವ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿವೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಥ ಸಂದರ್ಭಗಳನ್ನು ದಯವಿಟ್ಟು ವಿಚಾರಣೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

Committees constituted under the Minimum Wages Act.

Q.—99. Sri B. MADHAVACHAR (Bhadravati).—

Will the Government be pleased to state:—

the number of committees constituted under the Minimum Wages Act for fixing minimum wages in the industrial concerns in the State?

A.—Sri A. G. RAMACHANDRA RAO (Minister for Law and Education).—

None.

ಶ್ರೀ ಬಿ. ಮಾಧವಾಚಾರ್.—ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿ ವಯಸ್ಕರಾದ ಗಂಡಸರು ಮತ್ತು ಹೆಂಗಸರು ಕೆಲಸಗಾರರಿಗೆ ಎಷ್ಟು ಕೂಲಿ ಕೊಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಯಾವ ಕೈಗಾರಿಕೆಗಳಲ್ಲಿ ಎಷ್ಟೆಷ್ಟು, 'ಮಿನಿಮಂ ವೇಜಸ್', ಎಂಬುದನ್ನು ಇಲ್ಲಿ ಕೊಟ್ಟಿದೆ.

ಶ್ರೀ ಬಿ. ಮಾಧವಾಚಾರ್.—ಇನ್ನೂ ಆ ರೀತಿ ಮಾಡಿಲ್ಲ. ಈಗ ಏನು ಕೊಡುತ್ತಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಷೆಡ್ಯೂಲಿನಲ್ಲಿ ಆ ದರಗಳನ್ನು ಕೊಟ್ಟಿದೆ. ಇಂಡಿಯಾ ಸರ್ಕಾರದವರು ಗೊತ್ತುಮಾಡಿದ್ದಾರೆ. ಅದರ ಪ್ರಕಾರ ಕೊಡುತ್ತಾರೆ.

Sri B. MADHAVACHAR.—Will this Minimum Wages Act apply both to private and Government owned industries?